

ಆಗಸದಲ್ಲಿ ಒಟ್ಟಾಗಿ ಹಾರುವಾಗ ಕೂಗುತ್ತಾ, ಪರಸ್ಪರ ಧೈರ್ಯವನ್ನು ತುಂಬುತ್ತಾ ಚಲಿಸುತ್ತವೆ. ಯಾವ ದಾರಿಯಲ್ಲಿ ಹಾರಿ ಬಂದಿದ್ದವೋ ಅದೇ ದಾರಿಯಲ್ಲಿ ವಾಪಸ್ಸು ಹೋಗುತ್ತವೆ. ಸೂರ್ಯನ ಚಲನೆ ಮತ್ತು ಭೂಮಿಯ ಗುರುತ್ವಾಕರ್ಷಣಾ ಶಕ್ತಿಯ ಸಹಾಯ ಬಳಸಿಕೊಂಡು ಇವು ತಮ್ಮ ದಾರಿಯನ್ನು ಖಚಿತಪಡಿಸಿಕೊಳ್ಳುತ್ತವೆ. ಈ ಪ್ರಕೃತಿಯ ಕಾಲ ಬದಲಾವಣೆಗಳೇ ಇವುಗಳ ಗೂಗಲ್ ಮ್ಯಾಪ್. ವಲಸೆ ಪಕ್ಷಿಗಳಾದ ಕಾರಣ ಇವುಗಳಿಗೆ ಸಂಕೋಚ ಮತ್ತು ಹೆದರಿಕೆ ಹೆಚ್ಚು. ಸ್ಥಳೀಯ ಪಕ್ಷಿಗಳ ಜೊತೆ ಜಗಳ ಮಾಡಿಕೊಳ್ಳದೆ ನಾಜೂಕಾಗಿ ಇದ್ದು ತಮ್ಮ ಬದುಕಿನ ಅರ್ಧ ಭಾಗವನ್ನು ಭಾರತದಲ್ಲಿ ಸುಖವಾಗಿ ಕಳೆಯುತ್ತವೆ. ನೋಡಲು ನೂರಾರು ಸಂಖ್ಯೆಯಲ್ಲಿ ಒಟ್ಟಾಗಿರುವಂತೆ ಕಂಡರೂ ತಮ್ಮೊಳಗೆ ಪ್ರತ್ಯೇಕ ಗುಂಪುಗಳನ್ನು ರೂಪಿಸಿಕೊಂಡಿರುತ್ತವೆ. ಅಪಾಯದ ಮುನ್ಸೂಚನೆಯನ್ನು ಪರಸ್ಪರ ಹಂಚಿಕೊಳ್ಳುವುದು. ಆಹಾರ ಸಿಗುವ ಜಾಗವನ್ನು ಮತ್ತೊಬ್ಬರಿಗೆ ಹೇಳುವುದು. ಯೋಜಿತ ರೀತಿಯಲ್ಲಿ ಗುಂಪಾಗಿ ಒಂದೊಂದು ಹೊಲಗಳ ಬಳಿಯೂ ಅಗತ್ಯವಿದ್ದಷ್ಟು ಬಾತುಗಳು ಧಾನ್ಯ ಹೆಕ್ಕಲು ಇಳಿಯುವುದು ಎಲ್ಲವೂ ಕ್ರಮಬದ್ಧ ಯೋಜಿತ ರೂಪದಲ್ಲೇ ಇರುತ್ತದೆ.

ಒಂದು ಸಲ ಇದೊಂದು ಅಚ್ಚರಿಯ ಘಟನೆ ನಡೆಯಿತು. ಮಾಗಡಿ ಕೆರೆಯಿಂದ ಎಲ್ಲಾ ಹಕ್ಕಿಗಳು ವಾಪಸ್ಸು ತಮ್ಮ ದೇಶಕ್ಕೆ ಹೊರಟುಹೋದವು. ಆದರೆ, ಅವಧಿ ಮುಗಿದ ನಂತರವೂ ಆ ಕೆರೆಯಲ್ಲಿ ಕೇವಲ ನಾಲ್ಕೈದು ಬಾತುಗಳು ಹೋಗದೆ ಹಾಗೇ ಉಳಿದುಕೊಂಡಿದ್ದವು. ಸ್ಥಳೀಯ ಪಕ್ಷಿತಜ್ಞರಿಗೆ ಈ ವಿಷಯ ಆಶ್ಚರ್ಯವಾಗಿ ಕಂಡಿತು. ಇವು ಏಕೆ ವಾಪಸ್ ಹೋಗುತ್ತಿಲ್ಲ! ಎಂದು ಅವುಗಳ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದರು. ಒಂದೆರಡು ದಿನವಾದರೂ ಅವು ಆಹಾರ ಹುಡುಕಲೂ ಹೋಗದೆ ಉಪವಾಸವಿದ್ದವು. ಪರಿಶೀಲಿಸಿ ನೋಡಿದಾಗ ಒಂದು ಪಕ್ಷಿಯ ಸುತ್ತ ತಕಪಕ ಕುಣಿಯುತ್ತ ಗಸ್ತು ತಿರುಗುತ್ತಿದ್ದವು. ನಡುವೆ ಇದ್ದ ಹಕ್ಕಿಗೆ ಆಗಾಗ ಧೈರ್ಯ ತುಂಬುತ್ತಿದ್ದವು. ಇವು ಏಕೆ ಹೀಗೆ ವಿಚಿತ್ರವಾಗಿ ವರ್ತಿಸುತ್ತಿದ್ದಾವೆ ಎಂದು ಮತ್ತಷ್ಟು ಗಮನಿಸಿ ನೋಡಿದಾಗ ಆಘಾತದ ವಿಷಯವೊಂದು ಗೊತ್ತಾಯಿತು. ಎಲ್ಲರಿಂದ ಸಾಂತ್ವನ ಹೇಳಿಸಿಕೊಳ್ಳುತ್ತಿದ್ದ ಆ ಒಂದು ಹಕ್ಕಿಯ ಒಂದು ಕಾಲು ಮುರಿದಿತ್ತು. ಅದು ಹಾರಲು ಸಾಧ್ಯವಾಗದೆ ಒದ್ದಾಡುತ್ತಾ ರೋದಿಸುತ್ತಿತ್ತು. ಇಂತಹ ದುಃಸ್ಥಿತಿಯಲ್ಲಿರುವ ತಮ್ಮ ಗೆಳೆಯನನ್ನು ಬಿಟ್ಟು ಹೋಗಲು ಮನಸ್ಸಾಗದ ಆ ಹಕ್ಕಿಗಳು ಅದರ ಜೊತೆಗೆ ನಾಲ್ಕೈದು ದಿನ ಕಾಲ ಹಾಕಿದವು. ಏನಾದರೂ ಮಾಡಿ ತಮ್ಮ ಈ ಮಿತ್ರನನ್ನು ಹಾರಿಸಿಕೊಂಡು ಮತ್ತೆ ತಾಯ್ನಾಡಿಗೆ ವಾಪಸ್ಸು ಕರೆದುಕೊಂಡು ಹೋಗುವ ಇರಾದೆ ಈ ಪಕ್ಷಿಗಳ ಮನಸ್ಸಿನಲ್ಲಿ ಅಚಲವಾಗಿತ್ತು. ಆದರೆ ಹಕ್ಕಿಗೆ ಬಿದ್ದ ಏಟು ದೊಡ್ಡದಾದ ಕಾರಣ ಅದು ಮತ್ತೆ ಹಾರಲು ಸಾಧ್ಯವೇ ಇರಲಿಲ್ಲ. ಹೀಗೆ ಮೂರ್ನಾಲ್ಕು ದಿನ ಆ ಪಕ್ಷಿಯನ್ನು ಹೇಗಾದರೂ ಮಾಡಿ ಕರೆದುಕೊಂಡು ಹೋಗಲು ಪ್ರಯತ್ನಿಸಿದ ಬಾರ್ ಹೆಡೆಡ್ ಗೀಸ್ ಹಕ್ಕಿಗಳು ಕೊನೆಗೂ ಯಶಸ್ವಿಯಾಗಲಿಲ್ಲ. ದುಃಖದಿಂದ ಸೋತು ಹೊರಟು ನಿಂತವು. ಗಾಯಗೊಂಡ ಪಕ್ಷಿಯ ಪ್ರಾಣ ಹೊರಟೇ ಹೋಗಿತ್ತು. ತಮ್ಮ ಗುಂಪಿನ ಸಂಗಾತಿಯೊಬ್ಬ ಊನಗೊಂಡರೆ ಅವನನ್ನು ಬಿಟ್ಟು ಹೋಗಬಾರದು, ಏನಾದರೂ ಮಾಡಿ ವಾಪಸ್ಸು ಕರೆದುಕೊಂಡೇ ಹೋಗಬೇಕು ಎಂಬ ಹಟ ಮತ್ತು ಛಲ ಇರುವ ಪಕ್ಷಿಗಳ ಔದಾರ್ಯದ ಬದುಕು ಸಾಮಾನ್ಯ ಎನ್ನಲು ಸಾಧ್ಯವೇ? ●